**ಕರ್ನಾಟಕ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿ, ಮಲ್ಲೇಶ್ವರಂ, ಬೆಂಗಳೂರು – 560 003**
**KARNATAKA SECONDARY EDUCATION EXAMINATION BOARD, MALLESWARAM, BANGALORE – 560 003**

**ಎಸ್.ಎಸ್.ಎಲ್.ಸಿ. ಪರೀಕ್ಷೆ, ಜೂನ್, 2014**
**S.S.L.C. EXAMINATION, JUNE, 2014**

# ಮಾದರಿ ಉತ್ತರಗಳು
# MODEL ANSWERS

ದಿನಾಂಕ : 17. 06. 2014 — **ಸಂಕೇತ ಸಂಖ್ಯೆ : 01-K**

Date : 17. 06. 2014 — **CODE NO. : 01-K**

## ವಿಷಯ : ಪ್ರಥಮ ಭಾಷೆ — ಕನ್ನಡ
## Subject : FIRST LANGUAGE — KANNADA

[ ಪರಮಾವಧಿ ಅಂಕಗಳು : 125
[ Max. Marks : 125

| ಪ್ರಶ್ನೆ ಸಂಖ್ಯೆ | ಉತ್ತರದ ಕ್ರಮಾಕ್ಷರ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|---|
| | | ಬಹು–ಆಯ್ಕೆಯ ಪ್ರಶ್ನೆ ಸಂಖ್ಯೆ 1 ರಿಂದ 15 ರವರೆಗಿನ ಪ್ರತಿ ಸರಿಯುತ್ತರಕ್ಕೆ ಒಂದು ಅಂಕ : | 15 × 1 = 15 |
| 1. | (ಬಿ) | ಅಲ್ಪಪ್ರಾಣ | |
| 2. | (ಡಿ) | ನೇಕಾರ | |
| 3. | (ಬಿ) | ನಾನು | |
| 4. | (ಎ) | ಇಂ | |
| 5. | (ಡಿ) | ಕೇಳದು | |
| 6. | (ಬಿ) | ನಾಮ ಪ್ರಕೃತಿ | |
| 7. | (ಡಿ) | ಮುಂಗಾರು | |
| 8. | (ಬಿ) | ಶ್ರೇಣಿಕಾ | |
| 9. | (ಎ) | ಬಾಯಾರಿಕೆ | |
| 10. | (ಸಿ) | ಪ್ರಶ್ನಾರ್ಥಕ | |
| 11. | (ಎ) | ಎತ್ತಿಕೊಂಡು | |
| 12. | (ಸಿ) | ಯಣ್ | |
| 13. | (ಸಿ) | ಬರೆಯುತ್ತ | |
| 14. | (ಡಿ) | ಗಾರ | |
| 15. | (ಬಿ) | ಕಂಬನಿ | |

[ Turn over

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 16. | ಹೊಂದಿಸಿ ಬರೆಯುವುದು. (ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) | 5 × 1 = 5 |
| | i) ಇ) ಮನೆ ಮನೆ | |
| | ii) ಈ) ಕಣ್ಣಿಡು | |
| | iii) ಅ) ಗುಳುಗುಳು | |
| | iv) ಋ) ಜಂಗಾಲು | |
| | v) ಊ) ಬೇಸಾಯ | |
| | ಬಿಟ್ಟ ಸ್ಥಳಗಳನ್ನು ಸೂಕ್ತ ಪದಗಳಿಂದ ತುಂಬುವುದು. (ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) | 5 × 1 = 5 |
| 17. | ವ್ಯಾವಹಾರಿಕ | |
| 18. | ಹೊಟ್ಟೆ | |
| 19. | ಚಂದನದಾಸನು | |
| 20. | ಋತವ | |
| 21. | ಕೆಣಕಿದ | |
| | ಒಂದೊಂದು ವಾಕ್ಯದಲ್ಲಿ ಉತ್ತರಿಸುವಿಕೆ. (ಪ್ರತಿ ಸರಿಯುತ್ತರಕ್ಕೆ ಒಂದು ಅಂಕ) | 10 × 1 = 10 |
| 22. | ಎಣ್ಣೆ ತುಪ್ಪದ ಮಿಶ್ರಣ ಬೇಡವೆಂದು ಹೇಳಿದವನು ನಯಸೇನ. | |
| 23. | ಅಜ್ಜನು ಹಸಿವಿಲ್ಲವೆಂದು ಎದ್ದು ಕೈತೊಳೆಯಲು ಹೋದಾಗ ಮಕ್ಕಳು ಅಜ್ಜನ ಎಡೆಗೆ ಕೈ ಹಾಕಿದವು. | |
| 24. | ಶಾಲೆಯಲ್ಲಿ ದಾಖಲೆಯಲ್ಲಿಲ್ಲದ ಮಕ್ಕಳು ಮೇಷ್ಟ್ರ ಮಕ್ಕಳು. | |
| 25. | ಸಿದ್ಧಾರ್ಥಕನಿಗೆ ಉಚಿತವನ್ನು ಕೊಡಿಸಿದವರು ಶಕಟದಾಸ. | |
| 26. | ಮೊಲವು ಬಾವಿಯಲ್ಲಿ ತನ್ನ ಪ್ರತಿಬಿಂಬವನ್ನು ಕಂಡಿತು. | |
| 27. | ಜನ್ಮಭೂಮಿಯನ್ನು ಮೀರಿದ ಸ್ವರ್ಗವಿಲ್ಲ. | |
| 28. | ಗರತಿ ತನ್ನ ತೌರಿಗೆ ಹೋಗಲು ತಾಸು ಹೊತ್ತು ಬೇಕೆಂದು ಹೇಳುತ್ತಾಳೆ. | |
| 29. | ತಾಯಿಯು ಕಂದನ ಮೋರೆಯನ್ನು ತೆಂಗಿನಕಾಯಿ ಎಳನೀರಿನಿಂದ ತೊಳೆಯುವೆನೆಂದು ಹೇಳುತ್ತಾಳೆ. | |
| 30. | ಅರ್ಜುನನು ಬಿಲ್ಲುಬಾಣ ಖಡ್ಗಗಳನ್ನಿಟ್ಟುಕೊಂಡು ತಪಸ್ಸು ಮಾಡುತ್ತಿರುವುದು ಶಬರನಿಗೆ ವಿಚಿತ್ರವಾಗಿ ಕಂಡಿತು. | |
| 31. | ದುರ್ಯೋಧನನು ವೈಶಂಪಾಯನ ಸರೋವರದಲ್ಲಿ ಅಡಗಿ ಕುಳಿತಿದ್ದನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಮೂರು–ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯುವುದು. | 15 × 2 = 30 |
| 32. | ಮಾನವನಿಗೆ ಬಿಡುವು ಹೆಚ್ಚಿದಂತೆ ತನ್ನ ಸುಖ ದುಃಖಗಳನ್ನು ಕಾವ್ಯರೂಪಕ್ಕೆ ಇಳಿಸುವ ಮಾರ್ಗ ಕಂಡುಕೊಂಡ. ಲೆಕ್ಕಪತ್ರಗಳನ್ನಿಡಲು ಉಪಯುಕ್ತವಾದ ಲಿಪಿ ಪರಿಷ್ಕರಣೆಗೊಂಡು ಮಾನವ ಸಾಹಿತ್ಯ ಕೃತಿಗಳನ್ನು ಬರೆದಿಡುವುದನ್ನು ಮಾನವ ಕಲಿತುಕೊಂಡರೆ. ಹೀಗೆ ಜ್ಞಾನಭಂಡಾರ ಭದ್ರವಾಗಲು ಲಿಪಿಯು ಸಹಾಯಕವಾಯಿತು. | |
| 33. | ಅಳುವು ಒಂದು ರಸಪಾಕ, ನಗುವು ಒಂದು ರಸಪಾಕ. ನಗುವು ಆತ್ಮದ ಪರಿಮಳವನ್ನು ಸುತ್ತಲೂ ಹರಡುವ ಕುಸುಮ. ಅಳುವು ಆತ್ಮವನ್ನು ಕಡೆದು ಅದರ ಸತ್ತ್ವವನ್ನು ಮೇಲೆತ್ತುವ ಕಡೆಗೋಲು ಎಂದು ಡಿ.ವಿ.ಜಿ.ಯವರು ಹೇಳಿದ್ದಾರೆ. | |
| 34. | ಕಾಲೇಜಿಗೆ ಬಿಡುವಿದ್ದಾಗ ಮಂಜಪ್ಪನವರು ಅಧ್ಯಯನ ಮಾಡುತ್ತಿದ್ದ ಗ್ರಂಥಗಳು, ಹೇಗಲ್, ಕ್ಯಾಂಟ್, ವಾಲ್ಟೇರ್, ರೂಸೋ ಮುಂತಾದ ದಾರ್ಶನಿಕರ ಕೃತಿಗಳನ್ನೂ, ಗ್ರೀಕ್ ಮಹಾಕವಿ ಹೋಮರನ ಇಲಿಯಡ್ ಮತ್ತು ಓಡಿಸ್ಸಿ ಮಹಾಕಾವ್ಯಗಳನ್ನು. | |
| 35. | ಮಂಜಪ್ಪನವರು 1937 ರಲ್ಲಿ ಎರಡು ವೃತ್ತಿಗಳನ್ನು ಒಟ್ಟಿಗೆ ನಡೆಸುತ್ತಿದ್ದರು. ಒಂದು ಕಡೆ ರಾಷ್ಟ್ರಸೇವೆ, ಇನ್ನೊಂದು ಕಡೆ ವಕೀಲಿ ವೃತ್ತಿ. ಎರಡನ್ನೂ ಅಷ್ಟೇ ಶ್ರದ್ಧೆಯಿಂದ ನಿರ್ವಹಿಸುತ್ತಿದ್ದರು. ಆದ್ದರಿಂದ ಎರಡು ದೋಣಿಗಳ ಮೇಲೆ ಕಾಲಿಟ್ಟಿದ್ದೆ ಎಂದು ಮಂಜಪ್ಪನವರು ಹೇಳಿದ್ದಾರೆ. | |
| 36. | ನಾವು ಎಲ್ಲಾ ಹೊಣೆಯನ್ನು ಹೊರಲು ಸಿದ್ಧರಾಗಬೇಕು. ಮಿಂಚಿ ಹೋದ ಕಾರ್ಯವನ್ನು ಕುರಿತು ಚಿಂತಿಸುತ್ತಿರಬಾರದು. ಅನಂತ ಭವಿಷ್ಯ ನಮ್ಮ ಮುಂದಿರುವುದನ್ನು ನೆನಪಿನಲ್ಲಿಡಬೇಕು. ಪ್ರತಿ ಯೋಜನೆ, ಮಾತು, ಕೆಲಸ ಇವು ಭವಿಷ್ಯತ್ತಿನ ಬೆಳಕಿನ ಬುತ್ತಿಯಾಗುವವು. | |
| 37. | ಪುರಾಣಗಳಲ್ಲಿ ನೌಕಾಯಾನದ ಉಲ್ಲೇಖಗಳಿವೆ. ಜಲಪ್ರಳಯದಿಂದ ಭೂಮಿಯೇ ನಾಶವಾಗುತ್ತಿರುವಾಗ ವಿಷ್ಣು ನೌಕೆಯನ್ನು ಬಳಸಿ ಸಪ್ತರ್ಷಿಗಳನ್ನು. ಮನುವನ್ನು ರಕ್ಷಿಸಿದ ಕಥೆ ವಿಷ್ಣುಪುರಾಣದಲ್ಲಿದೆ. ಚಿತ್ರಕೂಟದಲ್ಲಿದ್ದ ರಾಮನನ್ನು ಅಯೋಧ್ಯೆಗೆ ಕರೆದೊಯ್ಯಲು ಸೇನಾ ಸಮೇತನಾಗಿ ಬಂದ ಭರತನನ್ನು ಬಂಧಿಸಲು ಗುಹ ತನ್ನ ನೌಕಾಸೇನೆಗೆ ಆದೇಶ ನೀಡಿದ ಘಟನೆ ರಾಮಾಯಣದಲ್ಲಿದೆ. | |
| 38. | ವಿಷ್ಣುದಾಸನು ಪರಮ ಮಿತ್ರ ಚಂದನದಾಸನಿಗೆ ಆಪತ್ತು ಬಂದ ವಿಷಯವನ್ನು ತಿಳಿಸಿದನು. ತನ್ನ ಮಿತ್ರನಿಗೆ ಒದಗಿದ ವಿಪತ್ತನ್ನು ಸಹಿಸಲಾರದೆ ತನ್ನ ಮನೆ, ಧನಕನಕಾದಿಗಳನ್ನೆಲ್ಲ ಬಡಬಗ್ಗರಿಗೆ ಹಂಚಿದನು. ತಾನು ಅಗ್ನಿಪ್ರವೇಶ ಮಾಡುವ ನಿರ್ಧಾರ ಕೈಗೊಂಡನು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 39. | ಶಾಲೆಯ ನೋಟೀಸ್ ಬೋರ್ಡಿನ ಮೇಲೆ ಹೀಗೆಂದು ಬರೆಯಲಾಗಿತ್ತು :<br>i) ಮಕ್ಕಳು ಸರಿಯಾದ ಹೊತ್ತಿಗೆ ಶಾಲೆಗೆ ಬರಬೇಕು.<br>ii) ಪಾಠಕಾಲದಲ್ಲಿ ಗ್ರಾಮಸ್ಥರು ಒಳಕ್ಕೆ ಬರಕೂಡದು.<br>iii) ದಾಖಲೆಯಿಲ್ಲದ ಮಕ್ಕಳನ್ನು ಶಾಲೆಗೆ ಸೇರಿಸುವುದಿಲ್ಲ.<br>iv) ಸ್ಕೂಲಿನ ಒಪ್ಪಾರದಲ್ಲಿ ಗ್ರಾಮಸ್ಥರು ಯಾರೂ ಕುಳಿತು ಗಲಾಟೆ ಮಾಡಬಾರದು. | |
| 40. | ಜಿಂಕೆಯನ್ನು ಬೆನ್ನಟ್ಟಿದ ಪಾಂಡವರು ಬಾಯಾರಿಕೆಯಿಂದ ಬಳಲಿದರು. ನಕುಲನು ನೀರನ್ನು ಹುಡುಕುತ್ತ ಹೊರಟ. ಸರೋವರವೊಂದನ್ನು ಕಂಡು ನೀರು ಕುಡಿಯಲು ಹವಣಿಸಿದಾಗ ಅಶರೀರವಾಣಿ ಎಚ್ಚರಿಸಿತು. ಅದರ ಎಚ್ಚರಿಕೆಯನ್ನು ನಿರ್ಲಕ್ಷಿಸಿ ನೀರು ಕುಡಿದ ನಕುಲ ಎಚ್ಚರ ತಪ್ಪಿಬಿದ್ದ. ನಂತರ ಬಂದ ಭೀಮಾದಿಗಳಿಗೂ ಇದೇ ಗತಿ ಒದಗಿತು. | |
| 41. | ಸಮುದ್ರಕ್ಕೆ ಸಮಾನವಾದ ಸರೋವರ ಆಕಾಶವು, ಮನುಜರಿಗೆ ಗೋವುಗಳು ಮಾತಾರೂಪ, ಸತ್ಯವು ಆಕಾಶದಲ್ಲಿ ಪ್ರಕಾಶಿಸುವ ಸೂರ್ಯನ ಪ್ರಭೆಗೆ ಸಮಾನ, ನೆಲಕ್ಕೆ ಹಿತವನ್ನುಂಟು ಮಾಡುವವನು ದೇವೇಂದ್ರ. ಹೀಗೆಂದು ಧರ್ಮರಾಜ ಅವುಗಳ ಶ್ರೇಷ್ಠತೆ ತಿಳಿಸಿದ್ದಾನೆ. | |
| 42. | ಜನಪದರು ಮಣ್ಣನ್ನು ನಂಬಿ ಮಣ್ಣಿನಿಂದಲೇ ಬದುಕುತ್ತಾರೆ ಅವರಿಗೆ ಮಣ್ಣು ಮುಂದೆ ಹೊನ್ನನ್ನು ನೀಡುತ್ತದೆ. ಆದ್ದರಿಂದ ಅವರಿಗೆ ಲೋಕದಲ್ಲಿ ಅತ್ಯಂತ ಬೆಲೆಬಾಳುವ ವಸ್ತುವು ಮಣ್ಣು ಅಂದರೆ ಭೂಮಿ ತಾಯಿಯಾಗಿದ್ದಾಳೆ. | |
| 43. | ಶಿವನು ಅರ್ಜುನನನ್ನು ಕುರಿತು ''ನಿನ್ನ ತಪಸ್ಸೆಲ್ಲಿ ? ಈ ಖಡ್ಗ ಬಿಲ್ಲು ಬಾಣಗಳೆಲ್ಲಿ ? ಇದು ಭೂಮಿಯಲ್ಲಿ ವಿಚಿತ್ರವಾಗಿದೆ. ನಮ್ಮ ಉದ್ಯೋಗ ಬೇಟೆಯಾಡುವುದು ನಿಜ. ಆದರೆ ನಿನ್ನಂತೆ ಶಾಂತಿ ಅಹಿಂಸೆಗಳ ಪ್ರತೀಕವಾದ ತಪಸ್ಸನ್ನಾಚರಿಸುವವನು ಹಿಂಸಾ ಪ್ರತೀಕ ಶಸ್ತ್ರಗಳನ್ನಿರಿಸಿಕೊಂಡಿರುವುದು ಸೋಜಿಗವೇ ಸರಿ'' ಎಂದು ಹಿಯಾಳಿಸಿದನು. | |
| 44. | ಹೂವಿನಲ್ಲಡಗಿದ ಪರಿಮಳದಂತೆ, ಸೂರ್ಯನಲ್ಲಿ ಬೆಂಕಿಯು ಅಡಗಿರುವಂತೆ, ಚಂದ್ರನಲ್ಲಿ ಅಡಗಿರುವ ಷೋಡಶ ಕಳೆಯಂತೆ ಸಿಡಿಲಿನಲ್ಲಿ ಅಡಗಿದ ಪ್ರಕಾಶದಂತೆ ಅಜಗಣ್ಣನಲ್ಲಿ ಯೋಗವು ಅಡಗಿದೆ ಎಂದು ಮುಕ್ತಾಯಕ್ಕೆ ಹೇಳಿದ್ದಾಳೆ. | |
| 45. | ಅಕ್ಕಮಹಾದೇವಿಯ ಅಭಿಪ್ರಾಯದಂತೆ ಈಳೆ, ನಿಂಬೆ, ಮಾವು, ಮಾದಲ ಹುಳಿರುಚಿಯುಳ್ಳ ಫಲಗಳು, ಬಾಳೆ, ಹಲಸು, ಕಬ್ಬು, ನಾರಿವಾಳಗಳು ಸಿಹಿ ಸ್ವಾದವುಳ್ಳ ಫಲಗಳು. | |
| 46. | ಕವಿ ಪಂಪನ ಮನಸ್ಸು ಬನವಾಸಿಯನ್ನು ನೆನೆಯಲು ಕಾರಣವಾದ ಅಂಶಗಳು – ತೆಂಕಣ ದಿಕ್ಕಿನಿಂದ ಬೀಸುವ ತಂಗಾಳಿ ಮೈಗೆ ಸೋಕಿದಾಗ ಒಳ್ಳೆಯ ನುಡಿ–ಮಾತುಗಳನ್ನು ಕೇಳಿದಾಗ, ಇಂಪಾದ ಮಧುರವಾದ ಗಾಯನ ಕಿವಿಗೆ ಕೇಳಿಸಿದಾಗ, ಸುಖನಿದ್ರೆ ಬಂದಾಗ, ಬಿರಿದು ಸೌರಭಸೂಸುವ ಮಲ್ಲಿಗೆ ಕಂಡಾಗ, ಮಧು ಮಹೋತ್ಸವ ಕಂಡಾಗ ಪಂಪನ ಮನಸ್ಸು ಬನವಾಸಿಯನ್ನು ನೆನೆಯುತ್ತದೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | ಸಂದರ್ಭ ಮತ್ತು ಸ್ವಾರಸ್ಯವನ್ನು ಬರೆಯುವುದು. | 5 × 3 = 15 |
| 47. | 'ರಸಿಕನಾಡಿದ ಮಾತು ಶಶಿಯುದಿಸಿ ಬಂದಂತೆ'<br><br>ಈ ವಾಕ್ಯವನ್ನು ಎಂ.ಎಸ್. ಸುಂಕಾಪುರ ಅವರು ಬರೆದ, ಕನ್ನಡ ಸಾಹಿತ್ಯದಲ್ಲಿ ಹಾಸ್ಯ ಎಂಬ ಕೃತಿಯಿಂದ ಆಯ್ದ ನಗು ಅಳು ಪಾಠದಿಂದ ಆಯ್ದುಕೊಳ್ಳಲಾಗಿದೆ.<br><br>ನಗೆಯ ವಿಧಗಳನ್ನು ತಿಳಿಸುವಾಗ ಲೇಖಕರು ಸರ್ವಜ್ಞನು ಹೀಗೆ ಹೇಳಿದ್ದಾರೆ. ನಗೆಗಳಲ್ಲಿ ಮೆಚ್ಚುನಗೆ ಚುಚ್ಚುನಗೆಯೆಂದು ಎರಡು ವಿಧ. ರಸಿಕ ವ್ಯಕ್ತಿಯ ಮಾತು ಎಲ್ಲರಿಗೂ ಸಂತೋಷವನ್ನುಂಟು ಮಾಡುವುದರಿಂದ ಅದು ಚಂದ್ರೋದಯವಾದಂತೆ ಎಂಬ ಸರ್ವಜ್ಞನ ಮಾತನ್ನು ಲೇಖಕರು ಉದಾಹರಿಸಿದ್ದಾರೆ. ರಸಿಕನಲ್ಲದವನ ಮಾತು ಕಿವಿಗೆ ಹರಿತ ಖಡ್ಗವನ್ನು ತುರುಕಿದಂತೆ ಎಂದು ಹೇಳಿದ್ದಾನೆ. | |
| 48. | 'ಮನಸ್ಸು ರೋಗ ಸೃಷ್ಟಿಸಬಲ್ಲುದು, ಗುಣಪಡಿಸಲೂಬಲ್ಲುದು'.<br><br>ಈ ವಾಕ್ಯವನ್ನು ಸ್ವಾಮಿ ಜಗದಾತ್ಮಾನಂದಜೀಯವರು ಬರೆದ 'ಬದುಕಲು ಕಲಿಯಿರಿ' ಎಂಬ ಗ್ರಂಥದಿಂದ ಆಯ್ದ 'ಶಕ್ತಿಯೇ ಜೀವನ' ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.<br><br>ಲೇಖಕರು ಮನಸ್ಸಿನ ಸೂಕ್ಷ್ಮತೆಯನ್ನು ಕುರಿತು ತಿಳಿಸುತ್ತಾ ಈ ಮಾತನ್ನು ಹೇಳಿದ್ದಾರೆ. ಮನಸ್ಸಿನಲ್ಲಿ ಉದಿಸುವ ಯೋಚನೆ ಎಂಬ ದ್ರವ್ಯದಿಂದ ವಿಷವನ್ನು ತಯಾರಿಸಬಹುದು, ಅಮೃತವನ್ನೂ ತಯಾರಿಸಬಹುದು. ನಿಷೇಧಮಯ ಭಾವನೆಗಳು ದೇಹದ ಅಂಗಾಂಗಗಳಿಗೆ ಕೆಡಕನ್ನುಂಟುಮಾಡಿ ರೋಗಗಳನ್ನು ಸೃಷ್ಟಿಸುತ್ತವೆ. ರಚನಾತ್ಮಕ ಭಾವನೆಗಳು ದೇಹವೆಂಬ ಯಂತ್ರದ ಎಲ್ಲಾ ಭಾಗಗಳಲ್ಲಿ ಉತ್ಸಾಹಯುತ ಆರೋಗ್ಯಕರ ಚಟುವಟಿಕೆಗಳಿಗೆ ಕಾರಣವಾಗುತ್ತದೆ. | |
| 49. | 'ಅತ್ಯಂತ ವರ್ಣರಂಜಿತ ವ್ಯಕ್ತಿತ್ವ ಕೌಟಿಲ್ಯನದು'.<br><br>ಈ ವಾಕ್ಯವನ್ನು ಎಚ್.ಕೆ. ಬಾಲಸೂರಿ ಅವರು ಬರೆದ 'ರಕ್ಷಾವಾಹಿನಿ' ಎಂಬ ಕೃತಿಯಿಂದ ಆಯ್ದ 'ನಮ್ಮ ಸೈನಿಕರು' ಎಂಬ ಪಾಠದಿಂದ ಆಯ್ದುಕೊಳ್ಳಲಾಗಿದೆ.<br><br>ಲೇಖಕರು ಯುದ್ಧದ ವಿಧಗಳನ್ನು ತಿಳಿಸುವಾಗ ಈ ಮಾತನ್ನು ಹೇಳಿದ್ದಾರೆ. ಭಾರತದ ಇತಿಹಾಸದಲ್ಲಿ ಮೌರ್ಯಸಾಮ್ರಾಜ್ಯ ಸ್ಥಾಪಿಸುವಲ್ಲಿ ಈತನ ಪಾತ್ರ ಮುಖ್ಯ. ಈತನ ಪ್ರಕಾರ ಪ್ರಕಾಶ ಯುದ್ಧಕೂಟ ಯುದ್ಧ ಮೌನಯುದ್ಧಗಳೆಂದು ಯುದ್ಧಗಳಲ್ಲಿ ಮೂರು ವಿಧ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 50. | 'ಇದು ಪಾಂಚಾಲಿ ಪ್ರಪಂಚಕ್ಕೆ' | |
| | ಈ ವಾಕ್ಯವನ್ನು ರನ್ನನ ಸಾಹಸಭೀಮ ವಿಜಯಂ ಕಾವ್ಯದಿಂದ ಆಯ್ದ ಕಾಲಾಗ್ನಿರುದ್ರಂ ಪೊರಮಡುವವೋಲ್ ಎಂಬ ಪದ್ಯ ಭಾಗದಿಂದ ಆಯ್ದುಕೊಳ್ಳಲಾಗಿದೆ. | |
| | ಭೀಮನಿ ತನ್ನ ಗದೆಯಿಂದ ದುರ್ಯೋಧನನಿಗೆ ಏಟನ್ನು ಹೊಡೆಯುವಾಗ ಕಾರಣಗಳನ್ನು ತಿಳಿಸುತ್ತಾ ಈ ಮಾತನ್ನು ಹೇಳಿದ್ದಾನೆ. ವೈಶಂಪಾಯನ ಸರೋವರದಿಂದ ಹೊರಬಂದ ದುರ್ಯೋಧನನು ಕೋಪದಿಂದ ಭೀಮನಿಗೆ ಕಾರಣಗಳನ್ನು ತಿಳಿಸುತ್ತಾ ಗದೆಯಿಂದ ಏಟುಗಳನ್ನು ಹೊಡೆದನು. ಪ್ರತಿಯಾಗಿ ಭೀಮನು ತನ್ನ ಗದೆಯಿಂದ ದುರ್ಯೋಧನನ ಐದು ದುಷ್ಕೃತ್ಯಗಳನ್ನು ತಿಳಿಸುತ್ತಾ ಹೊಡೆದ. ಅವುಗಳಲ್ಲಿ ದ್ರೌಪದಿ ವಸ್ತ್ರಾಪಹರಣದ ಪ್ರಸಂಗವನ್ನು ಭೀಮನು ಇಲ್ಲಿ ನೆನಪಿಸುತ್ತಾನೆ. | |
| 51. | 'ಕೆರೆಯಂ ಕಟ್ಟಿಸು ಬಾವಿಯಂ ಸವೆಸು'. | |
| | ಈ ವಾಕ್ಯವನ್ನು ಲಕ್ಷ್ಮೀಧರಾಮಾತ್ಯನ ಶಾಸನ ಪದ್ಯ – ಕನ್ನಡ ನಾಡಸಿರಿ ಎಂಬ ಪದ್ಯದಿಂದ ಆಯ್ದುಕೊಳ್ಳಲಾಗಿದೆ. ಲಕ್ಷ್ಮೀಧರಾಮಾತ್ಯನ ತಾಯಿ ಲೋಕೋಪಕಾರಿ ಕಾರ್ಯಗಳನ್ನು ತಿಳಿಸುತ್ತಾ ಈ ಮಾತನ್ನು ಹೇಳಿದ್ದಾಳೆ. ಕೆರೆಯನ್ನು ಕಟ್ಟಿಸು, ಬಾವಿಯನ್ನು ನಿರ್ಮಿಸು, ಅನಾಥರನ್ನು ರಕ್ಷಿಸು ಮಿತ್ರನಿಗೆ ಸಹಾಯಕನಾಗಿರು ಇವೇ ಮುಂತಾಗಿ ಉಪದೇಶಿಸುತ್ತಾಳೆ. ಎಳವೆಯಲ್ಲಿಯೇ ಮಗುವಿನಲ್ಲಿ ಪರೋಪಕಾರದ ಗುಣಗಳನ್ನು ತಾಯಿ ತುಂಬುತ್ತಿದ್ದಳು ಎಂಬುದು ಇಲ್ಲಿನ ಸ್ವಾರಸ್ಯ. | |
| | ಲೇಖಕ, ಕವಿಗಳ ಸ್ಥಳ, ಕಾಲ, ಕೃತಿಗಳನ್ನು ಬರೆಯುವುದು : | $2 \times 3 = 6$ |
| | ಕಾಲ ಮತ್ತು ಸ್ಥಳಕ್ಕೆ | 1 ಅಂಕ |
| | ಒಂದು ಕೃತಿಗೆ | 1 ಅಂಕ |
| | ವಾಕ್ಯರೂಪದ ವಿವರಣೆ ಭಾಷೆ, ಶೈಲಿಗಳಿಗೆ | 1 ಅಂಕ |
| | ಒಟ್ಟು | 3 ಅಂಕಗಳು |
| 52. | ಎಚ್.ಜೆ. ಲಕ್ಕಪ್ಪಗೌಡ : | |
| | ಇವರು 1939 ರಲ್ಲಿ ಹಾಸನಜಿಲ್ಲೆಯ ಅರಕಲಗೂಡು ತಾಲೂಕಿನ ಹಂಪಾಪುರದಲ್ಲಿ ಜನಿಸಿದರು. ಇವರ ಕೃತಿಗಳು ವಸಂತಗೀತ ಊರ ಮುಂದಿನ ಬಾವಿ, ದಲಿತ ಸೂರ್ಯ, ಸಿದ್ಧರಾಮ, ಸಂಗಮ, ಅಂತರಂಗ, ಜನಪದ ಕಥಾವಳಿ, ಇಬ್ಬನಿ, ಒಗಟು, ಪದ್ದು ಹದ್ದು, ದೀನಬಂಧು, ಹೊನ್ನಾರು ಎಂಬ ಕೃತಿಗಳನ್ನು ರಚಿಸಿದ್ದಾರೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 53. | ಪುಲಿಗೆರೆ ಸೋಮನಾಥ<br>ಈತನು ಕ್ರಿ.ಶ. 1299 ರಲ್ಲಿ ಧಾರವಾಡ ಜಿಲ್ಲೆಯ ಶಿರಹಟ್ಟಿ ತಾಲ್ಲೂಕಿನ ಪುಲಿಗೆರೆಯವನು. ಕನ್ನಡದಲ್ಲಿ ರತ್ನಕರಂಡಕ ಕಾವ್ಯವನ್ನು ಚಂಪುವಿನಲ್ಲಿ, ಸೋಮೇಶ್ವರ ಶತಕವನ್ನು ವೃತ್ತ ಛಂದಸ್ಸಿನಲ್ಲಿ ಬರೆದಿದ್ದಾನೆ. | |
| 54. | ಪದ್ಯಭಾಗಕ್ಕೆ ಪ್ರಸ್ತಾರ ಹಾಕಿ, ಗಣ ವಿಭಾಗ ಮಾಡಿ, ಛಂದಸ್ಸಿನ ಹೆಸರನ್ನು ಬರೆಯುವುದು. | 1 × 3 = 3 |
| | ಪ್ರಸ್ತಾರಕ್ಕೆ | 1 ಅಂಕ |
| | ಗಣ ವಿಭಾಗ | 1 ಅಂಕ |
| | ಛಂದಸ್ಸಿನ ಹೆಸರು | 1 ಅಂಕ |
| | ಒಟ್ಟು | 3 ಅಂಕಗಳು |

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| U U U | U – U | – U U | U – U | U – U | U – U | – U – |
| ಧನು ಶ | ರಮೆತ್ತ | ನಿನ್ನ ತ | ಪಮೆತ್ತ | ವಿಚಿತ್ರ | ಮಿದಲ್ತೆ | ಧಾತ್ರಿಯೊಳ್ |

ಇದು ಅಕ್ಷರಗಣಕ್ಕೆ ಸೇರಿದ ಚಂಪಕಮಾಲಾ ವೃತ್ತವು.

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 55. | 'ಅಳುವ ಕಂದನ ತುಟಿಯು ಹವಳದ ಕುಡಿಯಂಗ'. | 1 × 3 = 3 |
| | ಅಲಂಕಾರದ ಹೆಸರು | 1 ಅಂಕ |
| | ಲಕ್ಷಣ ಬರೆದು ಸಮನ್ವಯ | 2 ಅಂಕಗಳು |
| | ಒಟ್ಟು | 3 ಅಂಕಗಳು |

ಇದು ಉಪಮಾಲಂಕಾರವು

ಉಪಮಾನ : ಹವಳದ ಕುಡಿ

ಉಪಮೇಯ : ಕಂದನ ತುಟಿ

ಉಪಮಾವಾಚಕ : ಅಂಗ

ಸಾಧಾರಣ ಧರ್ಮ : ಸ್ಪಷ್ಟವಾಗಿಲ್ಲ

ಸಮನ್ವಯ : ಇಲ್ಲಿ ಉಪಮಾನವಾದ ಹವಳದ ಕುಡಿ ಹಾಗೂ ಉಪಮೇಯವಾದ ಕಂದನ ತುಟಿ ಇವುಗಳೆರಡರ ನಡುವೆ ಸುಂದರವಾದ ಹೋಲಿ ಕಂಡುಬರುವುದರಿಂದ ಇದು ಉಪಮಾಲಂಕಾರ

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 56. | ಗಾದೆ ಮಾತುಗಳನ್ನು ವಿಸ್ತರಿಸಿ ಬರೆಯುವುದು. | 1 × 3 = 3 |
| | ಗಾದೆಯ ಮಹತ್ವ ಮತ್ತು ಅರ್ಥ | 1 ಅಂಕ |
| | ಭಾಷಾ ಶೈಲಿ, ಉದಾಹರಣೆ ವಿವರಣೆ | 2 ಅಂಕಗಳು |
| | ಒಟ್ಟು | 3 ಅಂಕಗಳು |
| 57. | ಪದ್ಯ ಭಾಗ ಪೂರ್ಣ ಮಾಡಿ :<br>ಪರರ ಕಣ್ಣ ಕನ್ನಡದಲ್ಲಿ ಜಗದಿರವ ನೋಡುವುದ ತೊರೆ<br>ಶ್ರೀ ಹೃದಯ ಶಾರದೆಯ ಭಜಿಸಿ ಪಡೆದವಳ ಕರದ ಪುಸ್ತಕವ ತೆರೆ<br>ಭವ ಸಮುದ್ರದೊಳ್ ದುಮುಕಿ ತಂದು ನವರತ್ನ ವರ್ಷಗಳ ಕರೆ<br>ಜಗದಭಯದ ಶಲ್ಯಗಳ ತುಡುಕಿ ಹಿಡಿದೆಳೆ, ದೀಪ್ತಿಯಲಿ ಬೆಳೆ.<br>ಅಥವಾ<br>ಗುರುಹಿರಿಯರ ಅರಿಯದವನ ಅರಿವದೇತಕೆ<br>ಪರಹಿತಾರ್ಥಕಿಲ್ಲದವನ ಶರೀರವೇತಕೆ<br>ಹರಿಯ ಪೂಜೆ ಮಾಡದವನ ಜನುಮವೇತಕೆ<br>ಸೇರಿದವರ ಹೊರೆಯದಂಥ ದೊರೆಯು ಏತಕೆ | 1 × 4 = 4 |
| 58. | ಪದ್ಯಭಾಗದ ಸಾರಾಂಶವನ್ನು ಬರೆಯುವುದು. | 1 × 4 = 4 |
| | ಸಾರಾಂಶದ ವಿವರಣೆಗೆ | 3 ಅಂಕ |
| | ಭಾಷಾ ಶೈಲಿಗೆ | 1 ಅಂಕಗಳು |
| | ಒಟ್ಟು | 4 ಅಂಕಗಳು |
| | ಕವಿ ಅರವಿಂದ ಮಾಲಗತ್ತಿಯವರು ತಮ್ಮ ಮಾತೃಭೂಮಿ ಪದ್ಯದಲ್ಲಿ ಭಾರತಮಾತೆಯ ವೈಭವ ವೈಶಿಷ್ಟ್ಯಗಳನ್ನು ವರ್ಣಿಸುತ್ತ ಹೇಳಿದ ಮಾತುಗಳಿವು. ಹರಿವ ನದಿಗಳಿಗೆ ಕಟ್ಟಿದ ಆಣೆಕಟ್ಟುಗಳಿಂದಾಗಿ ವ್ಯವಸಾಯ ಕ್ಷೇತ್ರದಲ್ಲಾದ ಬದಲಾವಣೆಯಿಂದ ಆಹಾರ ಸಮೃದ್ಧಿಯುಂಟಾಗಿದೆ. ಭಾರತದಲ್ಲಿ ವಿವಿಧ ಸಂಸ್ಕೃತಿಗಳಿದ್ದರೂ ಭಾರತೀಯತೆ ಎಂಬ ಏಕ ಜೀವಶ್ರುತಿಯನ್ನು ಕಾಣಬಹುದಾಗಿದೆ. ಪ್ರಜೆಗಳೆಲ್ಲರ ಮಾತೆಯಾದ ಭಾರತಾಂಬೆಯು ಜಗತ್ತಿನ ಎಲ್ಲಾ ರಾಷ್ಟ್ರಗಳನ್ನು ಸ್ನೇಹಿತರಂತೆ ಕಾಣುವ ದೃಷ್ಟಿಕೋನ ಉಳ್ಳವಳು. ಆಯಾ ಧರ್ಮದವರಿಗೆ ವೇದ, ಕುರಾನ್, ಬೈಬಲ್‌ಗಳಂತೆ ಭಾರತಾಂಬೆಯು ಪವಿತ್ರಳೂ ಪೂಜನೀಯಳೂ ಆಗಿದ್ದಾಳೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 59. ಮತ್ತು 60. | ಎಂಟು ಅಥವಾ ಹತ್ತು ವಾಕ್ಯಗಳ ಗದ್ಯದ ಪ್ರಶ್ನೆಗಳಿಗೆ.<br><br>— ಬುದ್ಧನು ಅಂಗುಲಿಮಾಲನ ಮನಸ್ಸನ್ನು ಪರಿವರ್ತಿಸಿದ ಬಗೆ<br><br>ಇಹಲೋಕದ ಸಾರ್ವಭೌಮನೆಂದು, ಮಹಾಕ್ರೂರಿ ನರಭಕ್ಷಕನೆಂದು ಕುಖ್ಯಾತಿ ಪಡೆದ ಅಂಗುಲಿಮಾಲ - ಇಂತಹವನನ್ನು ಕಾಣಲೆಂದು ಬುದ್ಧ ಬಂದ - ಆತನನ್ನು ಕಂಡು ಅಂಗುಲಿಮಾಲ ''ನಿಲ್ ಅಲ್ಲೆ, ಓ ಮನುಜ ಅಲ್ಲೆ ನಿಲ್'' ಎಂದು ಕೂಗಿದಾಗ ಬುದ್ಧ ''ನಿಂತೆ ಇರುವೆನು ನಾನು ನೀನಿನ್ನು ನಿಂತಿಲ್ಲ'' ಎಂದೆನ್ನುತ್ತಾ ನಡೆಯುತ್ತಲೇ ಬರುತ್ತಾನೆ. ತಾನು ಲೌಕಿಕ ಆಶಾಪಾಶಗಳಿಂದ ಮುಕ್ತನಾದವನು, ಅಂಗುಲಿಮಾಲನು ಲೌಕಿಕ ಬಂಧನಕ್ಕೆ ಒಳಗಾಗಿ ಚಂಚಲ ಚಿತ್ತದವನೆಂಬ ಅರ್ಥದಲ್ಲಿ ಬುದ್ಧ ಹೇಳುತ್ತಾನೆ. ಅಂಗುಲಿಮಾಲ ಕತ್ತಿಯನ್ನೆತ್ತಿ ಬುದ್ಧನನ್ನು ಸಮೀಪಿಸಿದಾಗ ಬುದ್ಧ ತಲೆಯೆತ್ತಿ ಆತನನ್ನು ದಿಟ್ಟಿಸುತ್ತಾನೆ. ಅಂಗುಲಿಮಾಲನು ಬುದ್ಧನನ್ನು ದಿಟ್ಟಿಸಿನೋಡಿದಾಗ ಆತನ ಅರಿವಿಲ್ಲದಂತೆ ಕೈಯ ಖಡ್ಗ ಜಾರಿ ಧರೆಗುರುಳುತ್ತದೆ. ''ನಿನ್ನ ಕಣ್ಣುಗಳಲ್ಲಿ ಕಡಲುಗಳು ಉರುಳುತ್ತವೆ'' ಎಂಬ ಮಾತಿಗೆ ಬುದ್ಧನು ಎಲ್ಲವೂ ಬಯಲು ಭ್ರಾಂತಿಯು ಕಂದ ಎಂದನು. ಬುದ್ಧನ ಈ ಮಾತುಗಳು ಅಂಗುಲಿಮಾಲನಿಗೆ ಹೊಸತಾಗಿ ಕಂಡವು. ಅಲ್ಲದೇ ಬುದ್ಧನು ತಾನಾಗಿಯೇ ಬೆರಳುಗಳನ್ನು ನೀಡಲು ಮುಂದಾದಾಗ ಅಂಗುಲಿಮಾಲನಿಗೆ ಆಶ್ಚರ್ಯವಾಗುತ್ತದೆ. ನೀನು ಕಾಣದಿಹ ರಾಜ್ಯವೊಂದಿದೆ. ಅದನ್ನು ತೋರಿಸಲೆಂದು ಬಂದೆನೆಂಬ ಬುದ್ಧನ ಮಾತು ಅಂಗುಲಿಮಾಲನಿಗೆ ಕುತೂಹಲ ಮುಟ್ಟಿಸಿತು. ಅಂಗುಲಿಮಾಲನು ಅದು ಯಾವ ರಾಜ್ಯವೆಂದು ಪ್ರಶ್ನಿಸಿದಾಗ ಗೆಲ್ಲುವ ಮೊದಲು ನಿನ್ನನ್ನು ನೀನು ಗೆಲ್ಲಬೇಕೆಂದು ಬುದ್ಧ ನುಡಿದ, ಮನದ ಆಶಾಪಿಶಾಚಕ್ಕೆ ಅಡಿಯಾಳೆಂದು ಹೇಳಿದ. ಒಮ್ಮೆ ಅಂಗುಲಿಮಾಲ ಕೆರಳಿದರೂ ಬುದ್ಧನ ಕಾಲಬಳಿ ಕುಸಿಯುತ್ತಾನೆ. ಆತನನ್ನು ಎತ್ತಿ ಬುದ್ಧ ಆಲಂಗಿಸಿದಾಗ ಅಂಗುಲಿಮಾಲನಿಗೆ ಏನೋ ಹೊಸ ಆನಂದವುಂಟಾಗಿ ಕ್ರಮೇಣ ಬುದ್ಧನ ಉಪದೇಶಕ್ಕೆ ಆತನ ಮನಸ್ಸು ಬಾಗುತ್ತದೆ. ದಾಸ್ಯ ಮತ್ತು ಅಪಮಾನದ ಚಿಹ್ನೆಗಳಾದ ಅಂಗುಲಿಮಾಲೆ ಮತ್ತು ಕಿರೀಟವನ್ನು ಕಿತ್ತೆಸೆಯಲು ಹೇಳುತ್ತಾನೆ. ಬುದ್ಧನ ಮಾತಿನಂತೆ ಅವೆಲ್ಲವನ್ನು ಕಿತ್ತೆಸೆದ ಅಂಗುಲಿಮಾಲನು ಆನಂದ ಅನುಭವಿಸುತ್ತಾನೆ. | $2 \times 4 = 8$ |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| | — ಮೊಲವು ಸಿಂಹವನ್ನು ಕೊಂದ ಬಗೆ<br><br>ಅರಣ್ಯದಲ್ಲಿ ಕಾಡಿನ ರಾಜ ಸಿಂಹವು ಪ್ರಾಣಿಗಳನ್ನು ಹಿಡಿದು ತಿನ್ನುತ್ತಿರುವಾಗ, ಎಲ್ಲಾ ಪ್ರಾಣಿಗಳು ಒಂದಾಗಿ ಮೊರೆಯಿಟ್ಟು, ಪ್ರತಿದಿನ ಸರದಿಯಂತೆ ಒಂದೊಂದು ಪ್ರಾಣಿಯನ್ನು ಆಹಾರವಾಗಿ ಕಳುಹಿಸಲು ಒಪ್ಪಿಕೊಂಡವು. ಒಂದು ಸಾರಿ ದೀರ್ಘಕರ್ಣನೆಂಬ ಮೊಲದ ಸರದಿ ಬಂದಾಗ ಅದು ನಿಧಾನಗತಿಯಲ್ಲಿ ಬಂತು. ದಾರಿಯಲ್ಲಿ ಬರುವಾಗ ಬಾಯಾರಿ ನೀರುಕುಡಿಯಲೆಳಸಿ ಹಳೆಯ ಬಾವಿಯನ್ನು ಕಂಡಿತು. ಅದರಲ್ಲಿ ತನ್ನ ಪ್ರತಿಬಿಂಬವು ಸ್ವಚ್ಛವಾಗಿ ಬಿಂಬಿಸುವುದನ್ನು ನೋಡಿತು. ಸಿಂಹವನ್ನು ಜಯಿಸುವ ಉಪಾಯವನ್ನು ಮನಸ್ಸಿನಲ್ಲಿ ಆಲೋಚಿಸಿ ಇಲ್ಲಿಯೇ ಆ ಸಿಂಹವನ್ನು ಕೊಲ್ಲಲು ಸಾಧ್ಯವೆಂದು ಭಾವಿಸಿ ಭಯಾತುರನಂತೆ ಬಂದು ಹಸಿದ ಸಿಂಹದ ಮುಂದೆ ಬಂದು ನಿಂತಿತು. ತಾನು ಬರಲು ತಡವಾದುದಕ್ಕೆ ದಾರಿಯಲ್ಲಿ ಸಿಂಹವೊಂದು ಅಡ್ಡಗಟ್ಟಿತೆಂದೂ ಅದು ಮೃಗರಾಜನಾದ ತಮ್ಮನ್ನು ಚಿಕ್ಕಪುಟ್ಟ ಪ್ರಾಣಿಗಳನ್ನು ತಿನ್ನುವುದಾದರೆ ಅದು ಸಿಂಹವಲ್ಲ ಗಾವಸಿಂಗವೆಂದು ತಮ್ಮನ್ನು ಹಿಯಾಳಿಸಿತೆಂದು ಮೊಲವು ಹೇಳಿತು. ಹಸಿವಿದ್ದ ಸಿಂಹವು ತುಂಬಾಕೋಪಗೊಂಡು. ''ಆ ಸಿಂಹವನ್ನು ಮೊದಲು ತೋರಿಸು. ಅವನನ್ನು ಕೊಂದು ನಂತರ ನಿನ್ನನ್ನು ತಿನ್ನುವೆ'' ಎಂದು ಗರ್ಜಿಸಿತು. ಮೊಲವು ಸಿಂಹವನ್ನು ಹಳೆಯ ಬಾವಿಯ ಬಳಿ ಕರೆದೊಯ್ದು ''ನಿಮ್ಮನ್ನು ಹೀಯಾಳಿಸಿದ ಸಿಂಹವು ಇಲ್ಲಿಯೇ ಇದೆ'' ಎಂದು ಬಾವಿಯನ್ನು ತೋರಿಸಿತು. ಸ್ವಚ್ಛಜಲದಲ್ಲಿ ಕಾಣುತ್ತಿದ್ದ ತನ್ನ ಪ್ರತಿಬಿಂಬವನ್ನು ಇನ್ನೊಂದು ಸಿಂಹವೆಂದು ಭಾವಿಸಿದ ಸಿಂಹವು ಬಾವಿಗೆ ಹಾರಿ ಮರಣಹೊಂದಿತು. ಹೀಗೆ ಮೊಲವು ಸಿಂಹವನ್ನು ಉಪಾಯದಿಂದ ಕೊಂದಿತು.<br><br>— ಪರಂಗಿ ಟೋಪಿ ಸಾಹೇಬರು ಶಾಲೆಗೆ ಭೇಟಿ ನೀಡಿದ ಪ್ರಸಂಗ<br><br>ತಿಪ್ಪೇನ ಹಳ್ಳಿಯ ಶಾಲೆಯ ಮೇಷ್ಟ್ರು ವೆಂಕಣ್ಣ ಶಾಲೆಯಲ್ಲಿ ಪಾಠ ಮಾಡುತ್ತಿರುವಾಗ ರಸ್ತೆಯಲ್ಲಿ ಒಂದು ಮೋಟಾರು ಬಂದು ನಿಂತಿತು. ಅದರಿಂದ ಇಳಿದ ಪರಂಗಿ ಟೋಪಿ ಸಾಹೇಬರು ಸರಸರನೆ ಶಾಲೆಯೊಳಕ್ಕೆ ಬಂದರು. ಅವರು ಕುರ್ಚಿಯ ಮೇಲೆ ಕೂಡ ಕುಳಿತುಕೊಳ್ಳಲಿಲ್ಲ. ಅವರು ಸಾಹೇಬರೆಂಬುದೇ ತಿಳಿಯಲಿಲ್ಲ. ಹಾಜರಿ ಎಷ್ಟು ಎಂದು ಕೇಳಿದರು. ಮೇಷ್ಟ್ರು ಮೂವತ್ನಾಲ್ಕು ಸ್ವಾಮಿ ಎಂದು ಹೇಳಿದರು. ಎಣಿಸಿದಾಗ ಮೂವತ್ತಾರು ಇರುವುದನ್ನು ಕಂಡ ಸಾಹೇಬರು ಮೇಷ್ಟ್ರಿಗೆ ಹೆಚ್ಚಿಗೆ ಇರುವ ಮಕ್ಕಳನ್ನು ಹೊರಕ್ಕೆ ಕಳುಹಿಸಿ ಎಂದರು. ಮೇಷ್ಟ್ರು ತಮ್ಮ ಮಕ್ಕಳಿಗೆ ಹೊರಕ್ಕೆ ಹೋಗುವಂತೆ ಹೇಳಿದರೂ ಮಕ್ಕಳು ಸಾಹೇಬರನ್ನು ನೋಡಿ ಮೊದಲೇ ಭಯಪಟ್ಟಿದ್ದ ಮಕ್ಕಳು ಮೇಷ್ಟ್ರ ಬಳಿ ಬಂದು ನಿಂತು ಕೊಂಡವು. ಅಷ್ಟರಲ್ಲಿ ಪರಂಗಿ ಟೋಪಿ ಸಾಹೇಬರು ಗಿರಕ್ಕನೆ ತಿರುಗಿಕೊಂಡು ಹೊರಟು ಬಿಟ್ಟರು. ಮೇಷ್ಟ್ರು ''ಸ್ವಾಮಿ, ಇವು ನನ್ನ ಮಕ್ಕಳು, ತಬ್ಬಲಿಗಳು'' ಎಂದು ಹೇಳುತ್ತಾ ಹಿಂದೆಯೇ ಹೋದರೂ ಸಾಹೇಬರು ಕಿವಿಯ ಮೇಲೆ ಏನನ್ನೂ ಹಾಕಿಕೊಳ್ಳದೆ ''ಸ್ಕೂಲು ಬಿಟ್ಟು ಬರಬೇಡಿ, ಹೋಗಿ ಪಾಠ ಮಾಡಿ'' ಎಂದು ಗದರಿಸಿ ಮೋಟಾರಿನಲ್ಲಿ ಹೊರಟೇ ಹೋದರು. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 61. | ಎಂಟು ಅಥವಾ ಹತ್ತು ವಾಕ್ಯಗಳ ಪದ್ಯದ ಪ್ರಶ್ನೆಗಳಿಗೆ ಉತ್ತರಗಳು. | 1 × 4 = 4 |
| | ವಿಷಯ ಸಂಗ್ರಹಕ್ಕೆ | 3 ಅಂಕಗಳು |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 4 ಅಂಕಗಳು |
| | — ಅರಿವು ಪದ್ಯದಲ್ಲಿ ಕನಕದಾಸರು ನೀಡಿದ ಜೀವನ ಸಂದೇಶ.<br>ಮಾನವ ಜನ್ಮ ಸಾರ್ಥಕವಾಗಬೇಕಾದರೆ ಮನುಷ್ಯ ಸಂಸ್ಕೃತಿ ಪರಂಪರೆಯನ್ನು ಅರಿತು ಸಮಾಜ ಮುಖಿಯಾಗಿ ಬಾಳಬೇಕು. ಆ ಕುರಿತು ಕನಕದಾಸರು ಸಂದೇಶ ನೀಡಿದ್ದಾರೆ. ಸತ್ಯವಂತರ ಸಹವಾಸವಿರಲು ತೀರ್ಥದ ಅವಶ್ಯಕತೆಯಿಲ್ಲ. ಅನ್ನದಾನವು ನಿತ್ಯವಿರಲಾಗಿ ಬಾಳಿನಲ್ಲಿ ಭಯಪಡುವ ಅವಶ್ಯಕತೆಯಿಲ್ಲ. ಗುರು ಹಿರಿಯರನ್ನು ಅರಿಯದವನ ಜ್ಞಾನ ನಿಷ್ಪ್ರಯೋಜಕ ಪರೋಪಕಾರ ಮಾಡದವನ ದೇಹ ವ್ಯರ್ಥ. ಹಾಗೆಯೇ ಹರಿಯ ಪೂಜೆ ಮಾಡದವನ ಜನ್ಮ, ಪ್ರಜೆಗಳನ್ನು ರಕ್ಷಿಸದ ದೊರೆ ನಿರರ್ಥಕವೆಂದು ದಾಸರು ಹೇಳಿದ್ದಾರೆ. ಹಣವನ್ನು ತಾನು ಅನುಭವಿಸಬೇಕು ಇಲ್ಲವೇ ಬೇರೆಯವರಿಗೆ ದಾನ ಮಾಡಬೇಕು. ಹಾಗಿಲ್ಲದಿದ್ದರೆ ಆ ಧನವು ವ್ಯರ್ಥ. ಅಪಮಾನಿತನಾಗಿ ಬದುಕುವುದು. ದೋಷ ಹುಡುಕುವವರ ನಡುವೆ ವಾಸಿಸುವುದು, ಬಂಧುಬಳಗದವರೊಡನೆ ಸೇರಿ ಅನುಭವಿಸದ ಭಾಗ್ಯ ನಿಷ್ಪ್ರಯೋಜಕವೆಂದು ಕನಕದಾಸರ ಅಭಿಪ್ರಾಯ. ಪತಿಯ ಇಂಗಿತವನ್ನರಿತು ನಡೆಯದ ಪತ್ನಿ, ಕಷ್ಟಕಾಲಕ್ಕೆ ನರವಾಗದ ಸ್ನೇಹ, ಬಾಳಲ್ಲಿ ಅತಿ ಬಯಕೆ ಉಪಯುಕ್ತವಲ್ಲವೆಂದು ಕನಕದಾಸರು ಸಂದೇಶ ನೀಡಿದ್ದಾರೆ.<br>— ಸರೋವರದಿಂದ ದುರ್ಯೋಧನ ಹೊರಬಂದ ರೀತಿ.<br>ಭೀಷ್ಮರ ಸಲಹೆಯಂತೆ ದುರ್ಯೋಧನನು ವೈಶಂಪಾಯನ ಸರೋವರದಲ್ಲಿ ಜಲಸ್ತಂಭನ ವಿದ್ಯೆಯ ಸಹಾಯದಿಂದ ಅಡಗಿ ಕುಳಿತಿದ್ದನು. ಆತನನ್ನು ಹುಡುಕುತ್ತ ಬಂದ ಪಾಂಡವರು ಆತನು ಸರೋವರದಲ್ಲಿರುವುದನ್ನು ಬೇಹುಗಾರರ ಮೂಲಕ ತಿಳಿದು ಸರೋವರದ ದಡಕ್ಕೆ ಬಂದು ಆತನನ್ನು ಮೇಲೆದ್ದು ಬಂದು ಯುದ್ಧಮಾಡುವಂತೆ ಮೂದಲಿಸುತ್ತಾರೆ. ಆದರೂ ಆತ ಹೊರಬರದಿರಲು ಭೀಮನು ಆತನನ್ನು ಮೂದಲಿಸಿ ಯುದ್ಧಕ್ಕೆ ಬಾ ಎಂದು ಸಿಂಹನಾದ ಮಾಡುತ್ತಾನೆ. ಆ ಸ್ವರವನ್ನು ಕೇಳಿ ತನ್ನ ಬದ್ಧವೈರಿಯಾದ ಭೀಮನ ಸ್ವರವನ್ನು ಕೇಳಿ ಸರೋವರದ ತಂಪಾದ ನೀರಿನೊಳಗಿದ್ದರೂ ದುರ್ಯೋಧನ ಕೋಪದಿಂದ ಬೆವತು ಹೋದನು. ಭೂಮಿಯಿಂದ ಹೊರಬರುವ ಸಕಲವನ್ನು ನಾಶಮಾಡುವ ಲಾವಾರಸದಂತೆ ದುರ್ಯೋಧನನು ಸರೋವರದ ಮಧ್ಯದಿಂದ ಹೊರಬಂದ. ಬಂದವನು ತನ್ನ ಬದ್ಧ ದ್ವೇಷಿಯಾದ ಭೀಮನು ಎಲ್ಲಿರುವನೆಂದು ಎಂಟು ದಿಕ್ಕುಗಳಲ್ಲಿಯೂ ನೋಡಿದ. ಪ್ರಳಯಕಾಲದ ನಟರಾಜನ ಹೊರಳುತ್ತಿರುವ ಉರಿಗಣ್ಣಿನಂತೆ ಕೆಂಪಾದ ಕಣ್ಣುಗಳನ್ನುಳ್ಳ ದುರ್ಯೋಧನನು ತನ್ನ ಭುಜವೆಂಬ ಗದೆಯನ್ನು ತೂಗಿದನು. ಹೀಗೆ ಕವಿ ಸರೋವರದಿಂದ ಹೊರಬಂದ ದುರ್ಯೋಧನನನ್ನು ವರ್ಣಿಸಿದ್ದಾನೆ. | |

| ಪ್ರಶ್ನೆ ಸಂಖ್ಯೆ | ಪ್ರಶ್ನಾನುಸಾರ ಮೌಲ್ಯಮಾಪನ | ಅಂಕಗಳು |
|---|---|---|
| 62. | ಪ್ರಬಂಧ ಲೇಖನ ಬರೆಯುವುದು : | 1 × 5 = 5 |
| | ಪ್ರಸ್ತಾವನೆ / ಪೀಠಿಕೆ | 1 ಅಂಕ |
| | ವಿಷಯದ ಬೆಳವಣಿಗೆ | 2 ಅಂಕಗಳು |
| | ಉಪಸಂಹಾರ / ಮುಕ್ತಾಯ | 1 ಅಂಕ |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |
| 63. | ಪತ್ರಲೇಖನ ಬರೆಯುವುದು : | 1 × 5 = 5 |
| | ಮನವಿ ಪತ್ರ : | |
| | ಇಂದ, ಗೆ – ವಿಳಾಸ<br>ಸಂಬೋಧನೆ, ವಿಷಯ | 1 ಅಂಕ |
| | ಪತ್ರದ ಒಡಲು | 2 ಅಂಕಗಳು |
| | ಸ್ಥಳ, ದಿನಾಂಕ<br>ಸಹಿಯೊಂದಿಗೆ ಮುಕ್ತಾಯ | 1 ಅಂಕ |
| | ಭಾಷಾ ಶೈಲಿಗೆ | 1 ಅಂಕ |
| | ಒಟ್ಟು | 5 ಅಂಕಗಳು |